# ಓದುವ ಹವ್ಯಾಸವೆಂದರೇನು, ಅದನ್ನು ಅಳೆಯುವುದು ಹೇಗೆ? *

ಎಂ. ಎಸ್. ಶ್ರೀಧರ್

**ಸಾರಾಂಶ:** ಓದುವ ಹವ್ಯಾಸ ಕ್ಷೀಣಿಸುತ್ತಿದ್ದು ಅದನ್ನು ಹೆಚ್ಚಿಸಬೇಕೆಂಬ ಕಳಕಳಿ ಎಲ್ಲ ಮಾಧ್ಯಮ ಹಾಗೂ ವೇದಿಕೆಗಳಲ್ಲಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಓದುವ ಹವ್ಯಾಸವೆಂದರೇನು? ಅದನ್ನು ಅಳೆಯಲು ಮಾನದಂಡಗಳಿವೆಯೇ? ಅದು ಕ್ಷೀಣಿಸುತ್ತಿದೆಯೇ? ಹಾಗಿದ್ದಲ್ಲಿ ಅದನ್ನು ಹೇಗೆ ಹೆಚ್ಚಿಸುವುದು ಮುಂತಾದ ಪ್ರಶ್ನೆಗಳನ್ನು ವಿಶ್ಲೇಷಿಸಿ ಈ ಬಗ್ಗೆ ಇರುವ ಉತ್ಪ್ರೇಕ್ಷೆಗಳು ಹಾಗೂ ತಪ್ಪು ಕಲ್ಪನೆಗಳನ್ನು ಪಟ್ಟಿ ಮಾಡುತ್ತಾ ಓದುವ ಹವ್ಯಾಸದ ಕೊರತೆಗೆ ಕಾರಣಗಳನ್ನು ಗುರುತಿಸಿ ಓದುವ ಹವ್ಯಾಸ ವೃದ್ಧಿಸುವ ಕ್ರಮಗಳನ್ನು ಈ ಲೇಖನ ಸೂಚಿಸುತ್ತದೆ.

**ಸೂಚಿಪದಗಳು:** ಓದುವ ಹವ್ಯಾಸ

ಇತ್ತೀಚಿನ ದಿನಗಳಲ್ಲಿ ಓದುವ ಹವ್ಯಾಸ, ಅಕ್ಷರ ಸಂಸ್ಕೃತಿ, ವಾಚನಾಭಿರುಚಿ, ಸಾಹಿತ್ಯಾಭಿರುಚಿ, ಪುಸ್ತಕ ಚಳುವಳಿ ಮತ್ತು ಗ್ರಂಥಾಲಯ ಚಳುವಳಿಗಳ ಬಗೆಗಿನ ಕಳಕಳಿ ನೇರ ಮತ್ತು ಪರೋಕ್ಷವಾಗಿ ಮಾಧ್ಯಮ ಮತ್ತು ಸಭೆಗಳಲ್ಲಿ ಹೆಚ್ಚು ಹೆಚ್ಚಾಗಿ ಕೇಳಿಬರುತ್ತಿದೆ. ಸಾರ್ವಜನಿಕರು, ಪುಸ್ತಕೋದ್ಯಮಿಗಳು, ಲೇಖಕರು, ಗ್ರಂಥಪಾಲಕರು ಮತ್ತು ಶಿಕ್ಷಣ ತಜ್ಞರು ತಮ್ಮ ಆತಂಕ ಮತ್ತು ಆಶಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ತಿಂಗಳೊಂದರಲ್ಲೇ ಈ ಬಗ್ಗೆ ಸುಮಾರು ಹದಿನೈದಕ್ಕೂ ಹೆಚ್ಚು ವರದಿ/ಲೇಖನಗಳು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು. ಒಂದೊಂದು ವರ್ಗದ ಪ್ರತಿನಿಧಿಗಳೂ ಅವರದೇ ಆದ ಸೀಮಿತ ಅರ್ಥದಲ್ಲಿ ಓದುವ ಹವ್ಯಾಸವನ್ನು ಅರ್ಥೈಸಿ ಸ್ಥೂಲ ಅನಿಸಿಕೆಗಳನ್ನು ಮಂಡಿಸುತ್ತಿದ್ದಾರೆ (ಪಟ್ಟಿ ನೋಡಿ). ಈ ಅನಿಸಿಕೆಗಳು ವಿಭಿನ್ನ ದೃಷ್ಟಿಕೋನದಿಂದ ವಿಷಯದ ಒಂದೊಂದು ಮಗ್ಗುಲನ್ನಷ್ಟೇ ತೆರೆದಿಡುತ್ತಿದ್ದು ವಿಷಯದ ಕ್ರೋಢೀಕರಣ ಮತ್ತು ಚರ್ಚೆಗೆ ಪೂರಕವಾಗುತ್ತಿಲ್ಲ ಮತ್ತು ಕಂಡುಕೊಳ್ಳಬೇಕಾದ ಪರಿಹಾರ ಅಥವ ರೂಪಿಸಬೇಕಾದ ಕಾರ್ಯಕ್ರಮಗಳು ಸ್ಪಷ್ಟವಾಗುತ್ತಲೂ ಇಲ್ಲ. ನಿಖರ ಅಂಕಿ ಅಂಶಗಳಿಂದ ಕೂಡಿದ ಸಮಗ್ರ ಚಿತ್ರಣಕ್ಕೆ ಬದಲಾಗಿ ಭಾವುಕ ವೈಯಕ್ತಿಕ ಅಭಿಪ್ರಾಯಗಳು ಸೃಷ್ಟಿಯಾಗುತ್ತಿವೆ. ಸ್ಪಷ್ಟ ಫಲಿತಾಂಶಗಳು ಅಷ್ಟಾಗಿ ಪ್ರಕಟಗೊಂಡಿಲ್ಲವಾದರೂ ಓದುವ ಹವ್ಯಾಸದ ಬಗ್ಗೆ ಹಲಕೆಲವು ಸರ್ವೇಕ್ಷಣೆಗಳು ಮತ್ತು ಅಧ್ಯಯನಗಳು ನಡೆದಿವೆ. ಉಪಯುಕ್ತತೆ ಪ್ರಶ್ನಾರ್ಹವಾದರೂ ಸ್ನಾತಕೋತ್ತರ ಹಾಗೂ ಪಿ ಹೆಚ್ ಡಿ ಸಂಶೋಧನೆಗಳೂ ನಡೆದಿವೆ. ಈ ಹಿನ್ನೆಲೆಯಲ್ಲಿ ಓದುವ ಹವ್ಯಾಸವೆಂದರೇನು, ಅದನ್ನು ಅಳೆಯಲು ಮಾನದಂಡವಿದೆಯೆ, ಓದುವ ಹವ್ಯಾಸ ಕಡಿಮೆಯಾಗಿದೆಯೆ, ಇದನ್ನು ಹೆಚ್ಚಿಸುವುದು ಎಂದರೇನು, ಇತ್ಯಾದಿ ಚರ್ಚೆ ಮತ್ತು ಅಧ್ಯಯನಗಳ ಅವಶ್ಯಕತೆ ಇದೆ.

***<u>ಕೆಲವು ಆತಂಕ/ ದೂರುಗಳು:</u>***

*೧. ಪುಸ್ತಕಗಳು ಹೆಚ್ಚು ಜನರನ್ನು ತಲುಪುತ್ತಿಲ್ಲ; ಜನ ಓದುವುದಿಲ್ಲ ಎನ್ನುವುದನ್ನು ಉತ್ಪ್ರೇಕ್ಷಿಸಿ ಹೇಳಲಾಗುತ್ತಿದೆ*

*೨. ಹೊಸ ಓದುಗರ ಸೃಷ್ಟಿಯಾಗುತ್ತಿಲ್ಲ, ಪುಸ್ತಕಗಳ ವೈಯಕ್ತಿಕ ಕೊಳ್ಳುವಿಕೆ ಬಹಳ ಕಡಿಮೆ; ಪುಸ್ತಕಗಳನ್ನು ಕೊಂಡು ಓದುವ ಚೈತನ್ಯ ಹೆಚ್ಚಾಗಿ ಇಂಗ್ಲೀಷ್ ಮಾಧ್ಯಮದಲ್ಲಿ ಓದಿದವರಲ್ಲಿದೆ*

*೩. ಶಿಕ್ಷಣ ಪದ್ಧತಿ ಓದುವ ಹವ್ಯಾಸ ಬೆಳೆಸಲು ಪೂರಕವಾಗಿಲ್ಲ; ಶಾಲೆ ಕಾಲೇಜುಗಳಲ್ಲಿ ವಾಚನಾಭಿರುಚಿ ಬೆಳೆಸಬೇಕಿದೆ*

*೪. ಹೊಸ ಇ–ಮಾಧ್ಯಮಗಳಿಂದ ಓದುವ ಹವ್ಯಾಸಕ್ಕೆ ತೊಡಕಾಗಿದೆ*

*೫. ಜಾಗತೀಕರಣದ ಜೀವನಶೈಲಿ ಪುಸ್ತಕ ಸಂಸ್ಕೃತಿಗೆ ಒತ್ತಾಸೆಯಾಗಿಲ್ಲ*

*೬. ಪುಸ್ತಕೋದ್ಯಮ ವ್ಯಾಪಾರಮುಖಿಯಾಗಿ ಓದುವ ಹವ್ಯಾಸ ವೃದ್ಧಿಗೆ ನೇರವಾಗಿ ಸ್ಪಂದಿಸುತ್ತಿಲ್ಲ; ಪುಸ್ತಕಗಳ ಬೆಲೆ ಹೆಚ್ಚು; ಪುಸ್ತಕೋದ್ಯಮ ಮತ್ತು ಗ್ರಂಥಾಲಯಗಳು ಬೇಡಿಕೆ ಹೆಚ್ಚಿಸುವ ಪ್ರಯತ್ನ ಮಾಡಬೇಕು*

*೭. ಒಳ್ಳೆಯದನ್ನು ಓದುವ ಪರಿಪಾಠ ಬೆಳೆಸಬೇಕಿದೆ; ಓದುಗ ಒಳ್ಳೆಯ ಪುಸ್ತಕಗಳ ಹುಡುಕಾಟದಲ್ಲಿದ್ದಾನೆ; ಒಳ್ಳೆಯದು ಯಾವುದು ಎಂಬುದರ ಬಗ್ಗೆ ಮಾಹಿತಿ ಮತ್ತು ಪ್ರಚಾರ ಅಗತ್ಯ; ೯೯ ಜೊಳ್ಳುಗಳ ಮಧ್ಯೆ ಏಕೈಕ ಗಟ್ಟಿ ಕೃತಿ ಹೊರಬಂದದ್ದು ಮುಚ್ಚಿ ಹೋಗುತ್ತಿದೆ; ಕೃತಿಯ ಗಟ್ಟಿತನಕ್ಕಿಂತ ಇಂದು ಸೇಲ್ಸ್‌ಮನ್‌ಶಿಪ್ ಅಗತ್ಯ.*

*೮. ಸಮಗ್ರ ಕೃತಿಗಳು ಪುನರಾವರ್ತನೆಯನ್ನು, ಸಂಭಾವನಾ ಗ್ರಂಥಗಳು ನಿಷ್ಠುರವಲ್ಲದ ಹೊಗಳಿಕೆಗಳನ್ನು ಒಳಗೊಳ್ಳುವುದು ಸಾಮಾನ್ಯ*

*೯. ಕವಿತೆ ಮತ್ತು ನಾಟಕ ಕೊಳ್ಳುವುದು/ಓದುವುದು ಕಡಿಮೆ, ಕಾದಂಬರಿಗಳು, ವ್ಯಕ್ತಿತ್ವ ವಿಕಸನ, ದೈನಂದಿನ, ಅಡಿಗೆ/ರುಚಿ, ವಾಸ್ತು ಭವಿಷ್ಯ ಇತ್ಯಾದಿ ಹೆಚ್ಚು ಪ್ರಚಲಿತ*

ಓದುವ ಹವ್ಯಾಸದಿಂದ ವ್ಯಕ್ತಿ, ಸಮಾಜ ಮತ್ತು ರಾಷ್ಟ್ರಕ್ಕೆ ಆಗುವ ಲಾಭಗಳು ಸರ್ವವೇದ್ಯ. ಓದುವ ಕ್ರಿಯೆಯಲ್ಲಿ ಓದುಗ ಪುಸ್ತಕದ ಪುಟದಲ್ಲಿ ಲೇಖಕ ಘನೀಕರಿಸಿದ ಭಾವನೆ, ಅನುಭವ, ಮಾಹಿತಿ ಮತ್ತು ಜ್ಞಾನಗಳನ್ನು ಪುನಃ ಸೃಷ್ಟಿಸಿಕೊಳ್ಳುತ್ತಾನೆ. ಕಣ್ಣು ಮತ್ತು ಬುದ್ಧಿಗಳನ್ನೊಳಗೊಂಡ ಓದು ಒಂದು ಸಂಕೀರ್ಣ ಕಾರ್ಯ. ಓದುವ ಹವ್ಯಾಸ ವಿದ್ಯಾಭ್ಯಾಸದ ಮಟ್ಟ ಮತ್ತು ಅಕ್ಷರತೆಗಳ ಅಳತೆಗೋಲಾಗಬೇಕು ಎಂಬುದೊಂದು ಆಶಯ. ಓದು, ಚರ್ಚೆ, ಬರಹ ಮತ್ತು ಚಿಂತನೆಗಳಿಗೆ ನಿಕಟ ಸಂಬಂಧವಿದೆ. ಓದುವ ಹವ್ಯಾಸವನ್ನು ಅಳೆಯಲು ಒಮ್ಮತದ ನಿರ್ಧಿಷ್ಟ ಮಾನದಂಡವನ್ನು ರೂಪಿಸಿಲ್ಲವಾಗಿ ಹೇಳಿಕೆಗಳು ವೈಯಕ್ತಿಕ (subjective) ಅಭಿಪ್ರಾಯಗಳಾಗಿವೆ. ಒಬ್ಬ ವ್ಯಕ್ತಿ ವರ್ಷಕ್ಕೆ ಕನಿಷ್ಠ ಎಷ್ಟು ಪುಸ್ತಕಗಳನ್ನು, ಯಾವ ಕಾರಣಕ್ಕಾಗಿ ಓದಿದರೆ ಆತನಲ್ಲಿ ಓದುವ ಹವ್ಯಾಸ ಇದೆ ಎಂದು ಹೇಳಬಹುದು? ಬರೀ ಪತ್ರಿಕೆಗಳನ್ನೋ ಅಥವಾ ಪಠ್ಯಪುಸ್ತಕಗಳನ್ನು ಓದುವವರನ್ನು ಓದುವ ಹವ್ಯಾಸ ಇದೆ ಎಂದು ಹೇಳಬಹುದೇ? ಮನರಂಜನೆಗಾಗಿ ಮಾತ್ರ ಅಥವಾ ಸಾಹಿತ್ಯವನ್ನು ಮಾತ್ರ ಓದುವವರಿಗೆ ಓದುವ

ಹವ್ಯಾಸ ಇದೆ ಎನ್ನಬಹುದೆ? ವೃತ್ತಿಯಿಂದಾಗಿ ಅನಿವಾರ್ಯವಾಗಿ ಓದಬೇಕಾದುದನ್ನು ಓದುವ ಹವ್ಯಾಸ ಎನ್ನಬಹುದೇ? ಇಂತಹ ಪ್ರಶ್ನೆಗಳೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿ ಓದುವ ಹವ್ಯಾಸವನ್ನು ವ್ಯಾಖ್ಯಾನಿಸುವುದು ಅಗತ್ಯ.

ಓದುವ ಹವ್ಯಾಸ ಅಳೆಯುವ ಮಾನದಂಡ ರೂಪಿಸಲು ಕನಿಷ್ಠ ನಾಲ್ಕು ಮೂಲ ಅಂಶಗಳನ್ನು ಪರಿಗಣಿಸಬಹುದು: 1. ವಿರಾಮ ವೇಳೆಯ ಬಳಕೆ; 2. ಮಾಧ್ಯಮ ಮತ್ತು ಓದಿಗಾಗಿ ವ್ಯಯಿಸುವ ವೇಳೆ; 3. ಪುಸ್ತಕ ಕೊಳ್ಳುವಿಕೆ ಮತ್ತು ಗ್ರಂಥಾಲಯಗಳ ಬಳಕೆ; 4. ಪತ್ರಿಕೆ ಮತ್ತು ನಿಯತಕಾಲಿಕೆಗಳ ಬಳಕೆ. ಓದುವ ಹವ್ಯಾಸ ಅನಿವಾರ್ಯವಾಗಿ ಅಕ್ಷರಸ್ಥರಿಗೆ ಸೀಮಿತವಾಗಿರುದರಿಂದ, ಓದುವ ಹವ್ಯಾಸದ ಯಾವುದೇ ವ್ಯಾಖ್ಯಾನವನ್ನು ಒಟ್ಟು ಜನಸಂಖ್ಯೆ ಮತ್ತು ಅದರಲ್ಲಿನ ಅಕ್ಷರಸ್ಥರ ಅನುಪಾತಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕು. ಉದಾಹರಣೆಗೆ ಕರ್ನಾಟಕದಲ್ಲಿ ಶೇ 56 ಅಕ್ಷರಸ್ಥರಿದ್ದಾರೆಂದರೆ ಅದೇ ಓದುವ ಹವ್ಯಾಸಕ್ಕೆ ಗರಿಷ್ಠ ಗುರಿ. ಅಕ್ಷರಸ್ಥರ ಸಂಖ್ಯೆ ಹೆಚ್ಚಿದಾಗ ಮಾರುಕಟ್ಟೆ ವ್ಯಾಪ್ತಿ ಕೂಡ ಹಿಗ್ಗುತ್ತದೆ. ಕನ್ನಡ ಬಲ್ಲವರು ರಾಜ್ಯದಲ್ಲಿ ಸುಮಾರು 4.4 ಕೋಟಿ ಇದ್ದು ಅಕ್ಷರಸ್ಥರು ಸುಮಾರು 2.5 ಕೋಟಿ ಇರಬಹುದು. ಕನ್ನಡದಲ್ಲಿ ಸುಮಾರು 15 ಲಕ್ಷ ಪುಸ್ತಕಗಳ ಪ್ರತಿಗಳು ಪ್ರತೀ ವರ್ಷ ಮುದ್ರಣಾಲಯದಿಂದ ಹೊರಬರುತ್ತವೆ. ಹಾಗೆಯೇ ದಿನನಿತ್ಯ 13 ಲಕ್ಷ ದಿನಪತ್ರಿಕೆಗಳ ಪ್ರತಿಗಳು ಪ್ರಸಾರವಾಗುತ್ತವೆ. ಸಾರ್ವಜನಿಕ ಗ್ರಂಥಾಲಯಗಳು ಜನಸಂಖ್ಯೆಯ ಶೇ 1.5 ರಷ್ಟು ಸದಸ್ಯತ್ವವನ್ನು ಹೊಂದಿವೆ. ಸ್ಥೂಲ ಅಂದಾಜಿನಂತೆ ಗ್ರಂಥಾಲಯ ಸದಸ್ಯತ್ವ, ಪುಸ್ತಕ ಮತ್ತು ಪತ್ರಿಕೆಗಳ ಪ್ರತಿಗಳೆಲ್ಲವನ್ನೂ ಸೇರಿಸಿ ಒಬ್ಬರಿಗೆ ಒಂದರಂತೆ ಎಣಿಸಿದರೂ ಒಟ್ಟು 35 ಲಕ್ಷಕ್ಕಿಂತ ಹೆಚ್ಚಿಲ್ಲ. ಅಂದರೆ ಒಟ್ಟು ಅಕ್ಷರಸ್ಥರಲ್ಲಿ ಹತ್ತಕ್ಕೆ ಒಬ್ಬರು ಒಂದು ಪುಸ್ತಕ/ಪತ್ರಿಕೆ ಓದುತ್ತಾರೆ. ಈ ಸೀಮಿತ ಅರ್ಥದಂತೆ ಓದುವ ಹವ್ಯಾಸ ಪ್ರತಿಶತ 10 ಕ್ಕಿಂತ ಕಡಿಮೆ ಎನ್ನಬಹುದು.

ಇತರ ದೇಶಗಳ ಅಧ್ಯಯನಗಳ ಕೆಲವು ಕುತೂಹಲಕರ ಫಲಿತಾಂಶಗಳು ಹೀಗಿವೆ: ಕಳೆದ ಒಂದು ಶತಮಾನದಲ್ಲಿ ಅಮೆರಿಕನ್ನರ ವೈಯಕ್ತಿಕ ವರಮಾನ, ಮನರಂಜನಾ ವೆಚ್ಚ ಮತ್ತು ವಿರಾಮ ವೇಳೆ ಗಣನೀಯವಾಗಿ ಹೆಚ್ಚಿದ್ದರೂ ವಾಚನಸಾಮಗ್ರಿ ವೆಚ್ಚ ಪ್ರತಿಶತ ೪೦ ರಷ್ಟು ಕುಸಿದಿದೆ; ಕಳೆದ ಆರು ತಿಂಗಳಲ್ಲಿ ಅರ್ಧದಷ್ಟು ಅಮೆರಿಕನ್ನರು ಒಂದು ಪುಸ್ತಕವನ್ನೂ ಓದಿಲ್ಲ; ಪ್ರತಿಶತ ೪೦ ರಷ್ಟು ಐರೋಪ್ಯ ದಂಪತಿಗಳು ಪುಸ್ತಕಳನ್ನೇ ಓದಿಲ್ಲ; ಎರಡು ಕಾರು ಖರೀಧಿಸಿದ ಐರೋಪ್ಯ ದಂಪತಿಗಳು ಎರಡು ಪುಸ್ತಕ ಖರೀಧಿಸಿದವರಗಿಂತ ಹೆಚ್ಚಿದ್ದಾರೆ; ಬ್ರೆಜಿಲ್‌ನಲ್ಲಿ ಅನಕ್ಷರಸ್ಥರ ಎರಡರಷ್ಟು ಮಂದಿ ಅಕ್ಷರಸ್ಥರಿಗೆ ಓದುವ ಹವ್ಯಾಸವೇ ಇಲ್ಲ. ಈ ಅಧ್ಯಯನಗಳ ವಿಧಾನ, ಸ್ಯಾಂಪಲ್ ಹಿನ್ನೆಲೆಯಲ್ಲಿ ಫಲಿತಾಂಶಗಳನ್ನು ಗಮನಿಸಬೇಕಾದರೂ, ನಮ್ಮಲ್ಲಿ ಇಂತಹ ನಿರ್ಣಾಯಕ ಅಧ್ಯಯನಗಳಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವೈಯಕ್ತಿಕ ವಾಚನಸಾಮಗ್ರಿ ವೆಚ್ಚ ಕಡಿಮೆಯಿದ್ದರೂ ವ್ಯಾಪಕ ಮತ್ತು ಬಲಿಷ್ಠ ಸಾರ್ವಜನಿಕ ಗ್ರಂಥಾಲಯ ಸೇವೆಗಳು ಆ ಕೊರತೆಯನ್ನು ತುಂಬುತ್ತವೆ.

***<u>ಓದುವ ಹವ್ಯಾಸದ ಕೊರತೆಗೆ ಕಾರಣಗಳು</u>***

*೧. ಲಾಭದಾಯಕವಲ್ಲ, ವೆಚ್ಚ ಅನಗತ್ಯ, ಸಮಯದ ಅಪವ್ಯಯ ಎಂಬ ಭಾವನೆ*
*೨. ಪೂರಕವಲ್ಲದ ಪರಿಸರ, ಶಿಕ್ಷಣ ವ್ಯವಸ್ಥೆ*
*೩. ಚರ್ಚೆ/ಅಭಿಪ್ರಾಯಗಳ ವಿನಿಮಯದ ಕೊರತೆ*
*೪. ಸಂಸ್ಕಾರವಂತ ಬುದ್ಧಿ, ಮನಸ್ಸು ಮತ್ತು ಅರಿವಿನ ಕೊರತೆ*
*೫. ಸಮೂಹ ಮಾಧ್ಯಮಗಳ ಅತಿಯಾದ ಗೀಳು*
*೬. ವ್ಯಾಪಕ ಪ್ರಚಾರದ ಕೊರತೆ*
*೭. ಸಮಯ, ತಾಳ್ಮೆ ಮತ್ತು ಮಾರ್ಗದರ್ಶನ/ ಸ್ಫೂರ್ತಿಯ ಕೊರತೆ*

ಓದುವ ಹವ್ಯಾಸ ಗುರುತಿಸಲು ಅಭಿಪ್ರಾಯ ಸಂಗ್ರಹಣೆ ಅಷ್ಟು ಸೂಕ್ತ ಮಾರ್ಗವಲ್ಲ. ಏಕೆಂದರೆ ತಮಗೆ ಓದುವ ಹವ್ಯಾಸವಿಲ್ಲ ಎಂದು ಒಪ್ಪಿಕೊಳ್ಳುವವರ ಸಂಖ್ಯೆ ಕಡಿಮೆ. ಓದುವ ಹವ್ಯಾಸ ಇದೆ ಎನ್ನುವವರನ್ನೂ ಅದರ ಅರ್ಥವಿವರಣೆ ಕೇಳಿ ತಿಳಿಯುವುದು ಸೂಕ್ತ. ಆದರೆ critical incident technique ನಂತಹ ತಂತ್ರದಿಂದ (ಅಂದರೆ ಈ ದಿನ/ ವಾರ/ತಿಂಗಳು ನೀವು ಓದಿದ ಪುಸ್ತಕ ಯಾವುದು ಎಂದು ಕೇಳಿ) ಪಡೆಯುವುದು ನಂಬಲರ್ಹ ಅಂಕಿ ಅಂಶಗಳನ್ನು ಒದಗಿಸುತ್ತದೆ. ಓದುವ ಹವ್ಯಾಸವಿರುವ ಓದುಗರೆಷ್ಟು, ಏನನ್ನು ಮತ್ತು ಎಷ್ಟನ್ನು ಓದುತ್ತಿದ್ದಾರೆ, ಹವ್ಯಾಸವಿಲ್ಲದವರಿಗೆ ಹೋಲಿಸಿದರೆ ಓದುಗರ ಗುಣವಿಶೇಷಗಳೇನು ಇತ್ಯಾದಿ ಓದುಗರ ದೃಷ್ಟಿಯಿಂದ ಅರಿಯಬೇಕಾದ ಅಂಕಿ ಅಂಶಗಳು. ಅದನ್ನೇ ಉಪಯೋಗಿಸುತ್ತಿರುವ ಪುಸ್ತಕ, ಪತ್ರಿಕೆ ಮತ್ತು ನಿಯತಕಾಲಿಕೆಗಳ ಮತ್ತು ಅವುಗಳ content ದೃಷ್ಟಿಯಿಂದ ನೋಡಿದಾಗ ಯಾವುದನ್ನು ಹೆಚ್ಚು ಓದುತ್ತಿದ್ದಾರೆ, ಏಕೆ ಮತ್ತು ಅದು ಆರೋಗ್ಯಕರವಾದದ್ದೆ ಇತ್ಯಾದಿ ತಿಳಿಯುವ ಅಧ್ಯಯನಗಳು ಸಮುದಾಯದ ವಾಚನಾಭಿರುಚಿಯನ್ನು ಬಿಂಬಿಸುತ್ತವೆ. ದುರದೃಷ್ಟವಶಾತ್ ಇದಾವುದರ ಸ್ಪಷ್ಟ, ನಂಬಲರ್ಹ ಚಿತ್ರ ನಮಗೆ ತಿಳಿಯದು.

---

* *ಕನ್ನಡ ಪ್ರಭ, ಜುಲೈ ೧೧, ೨೦೦೬, ಪು. ೬.*

**ಲೇಕಖರ ವಿವರ**

ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೭ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, ೧೯೭೮ ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ



ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್ ಅವರು ೪ ಪುಸ್ತಕಗಳು ಮತ್ತು ೮೮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪತ್ಯಗಳನ್ನೂ ಬರೆದಿದ್ದಾರೆ. ಇವರು ಮುಕ್ತ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ೧೯ ಪತ್ಯ ಸಾಮಾಗ್ರಿಯನ್ನು ರಚಿಸಿದ್ದಾರೆ. ಇದಲ್ಲದೆ ಸುಮಾರು ೪೫ ಲೇಖನ/ ಪ್ರವಚನಗಳನ್ನು ವಿವಿಧ ಸಮ್ಮೇಳನ / ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ.

**E-mail:** mirlesridhar@gmail.com,